# ಕೋಳಿಬಲಿ

“ಮಾರಿಕಟ್ಟೆಗೆ ಜೋಡಿ ಕೋಳಿ ಕೊಡ್ತೀನಿ ಅಂತಾ ಹರ್ಕೆ ಮಾಡ್ಕಂಡಿದ್ದೆ” ನಮ್ಮವ್ವ ನಮ್ಮಣ್ಣನಿಗೆ ಹೇಳುತ್ತಿದ್ದುದನ್ನು ಕೇಳಿ ನನ್ನ ಕಿವಿ ನಿಮಿರಿದವು. ನಮ್ಮಜ್ಜಿಯನ್ನು (ನನ್ನ ತಾಯಿಯ ತಾಯಿ) ನಮ್ಮಮ್ಮ–ದೊಡ್ಡಮ್ಮ ಮಾವಂದಿರೆಲ್ಲ ‘ಅವ್ವ, ಅವ್ವ’ ಎಂದು ಕರೆಯುತ್ತಿದುದರಿಂದ ಮೊಮ್ಮಕ್ಕಳಾದ ನಾವೂ ಅವಳನ್ನು ‘ಅವ್ವ’ ಎಂದೇ ಕರೆಯುತ್ತಿದ್ದೆವು. ಇದೇ ಸಮೀಕರಣದಲ್ಲಿ ನಮ್ಮಮ್ಮನ ಅಜ್ಜಿ–ನಮ್ಮ ಮುತ್ತಜ್ಜಿ ನಮ್ಮ ಬಾಯಲ್ಲಿ ‘ಅಜ್ಜಿ’ಯೇ ಆಗಿದ್ದಳು.

ಮಂಗಳವಾರ ಸಂಜೆ ಕಾಫಿ–ತೋಟದ ಅಗತೆ ಮುಗಿಸಿ ಮನೆಗೆ ಬಂದ ನನ್ನಮ್ಮ–ಅವ್ವ ಏನೋ ಬಹಳ ಗಹನವಾದ ಪ್ಲಾನು ಮಾಡುವರಂತೆ ಗುರುವಾರ ಬೆಳಿಗ್ಗೆ ‘ಮಾರಿಕಟ್ಟೆ’ಗೆ ಪೂಜೆ ಮಾಡಿಸುವ ಬಗ್ಗೆ ಮಾತನಾಡುತ್ತಿದ್ದರು. ಅವರು ಬಂದ ಸ್ವಲ್ಪ ಹೊತ್ತಿನಲ್ಲಿಯೇ ನನ್ನ ದೊಡ್ಡಮ್ಮನ ಮಗ–ನನ್ನಣ್ಣ ಬಂದ. ಅವನನ್ನು ನಮ್ಮವ್ವ ಜಗುಲಿಯಿಂದಾಚೆಗೆ, ಮನೆಯ ಮುಂದಿನ ಕೈತೋಟದೊಳಕ್ಕೆ ಕರೆದೊಯ್ದು ಪೂಜೆಯ ವಿಚಾರವನ್ನು ಪಿಸ–ಪಿಸ ಗುಸ–ಗುಸ ಮಾಡಿದಳು.ನಾನು ಇದ್ಯಾಕೆ ಪೂಜೆಯ ವಿಚಾರವನ್ನು ಇಷ್ಟೊಂದು ಗೌಪ್ಯವಾಗಿ ರಹಸ್ಯ ಕಾರಸ್ತಾನದಂತೆ ನಡೆಸುತಿದ್ದಾರೆ ಅಂತಾ ಕುತೂಹಲಗೊಂಡು ಕತ್ತಲಲ್ಲೇ ಅದೇ ಕೈತೋಟದ ಹಾದಿಯಲ್ಲೇ ಮೆಲ್ಲನೆ ಸರಿದು ನನ್ನವ್ವ–ಅಣ್ಣನ ಮಾತುಗಳನ್ನು ಕದ್ದು ಕೇಳಿಸಿಕೊಳ್ಳುವ ಪ್ರಯತ್ನ ಮಾಡಿದೆ. ಆಗಲೇ ನನಗೆ ಕೇಳಿಸಿದ್ದು ನಮ್ಮವ್ವನ ಮಾತು – “ಮಾರಿಕಟ್ಟೆಗೆ ಜೋಡಿ ಕೋಳಿ ಕೊಡ್ತೀನಿ ಅಂತಾ ಹರ್ಕೆ ಮಾಡ್ಕಂಡಿದ್ದೆ!”

ನಮ್ಮನೆಯೊಳಕ್ಕೆ ಕೋಳಿಯಿರಲಿ, ಕೋಳಿಯ ಮಾತೂ ಬರುವಂತಿರಲಿಲ್ಲ. ಅಂಥಾದ್ದರಲ್ಲಿ ನಮ್ಮವ್ವನೇ ‘ಮಾರಿಕಟ್ಟೆ’ಗೆ ಕೋಳಿ ಬಲಿ ಕೊಡುವ ಬಗ್ಗೆ ಮಾತನಾಡುತ್ತಿದ್ದುನ್ನು ಕೇಳಿ ನನಗೆ ಯಾಕೋ ಭಯವಾಯ್ತು. ಮೆಲ್ಲನೆ ಮನೆಯೊಳಕ್ಕೆ ಬಂದ ನನ್ನೆದೆ ಕಂಪಿಸುತ್ತಿತ್ತು. ‘ಮಾರಿಕಟ್ಟೆ’ಗೆ ಕೋಳಿ ಕೊಡೋದಾದ್ರೆ ಅದನ್ನ ಅಲ್ಲಿ ಕೊಯ್ಯೋರು ಯಾರು, ಕೊಯ್ದರೆ ನಮ್ಮನೇನಲ್ಲೇ ಅದರ ಸಾರು ಮಾಡಬಹುದೇನೋ, ಯಾರು ಮಾಡ್ತಾರೆ? ನಾವೆಲ್ಲ ಊಟ ಮಾಡಬೇಕಾ? ಅವ್ವನ್ನೂ ಕೋಳಿ ಸಾರು ತಿಂತಾಳಾ? ಹೀಗೇ ಏನೇನೋ ಯೋಚನೆಗಳು. ಅಷ್ಟು ಹೊತ್ತಿಗೆ ನಡುಮನೆಯಲ್ಲಿ ನಮ್ಮಮ್ಮ, ಗ್ಲಾಸು ಒರೆಸಿ–ಸೀಮೆಯೆಣ್ಣೆ ಬಿಟ್ಟು ಲ್ಯಾಂಪನ್ನು ಹೊತ್ತಿಸಿಟ್ಟಿದ್ದಳು, ಜೊತೆಗೆ ಆಗಲೇ ‘ಬಿಸಿನೀರು ಬಿಸಿಹಿಟ್ಟು ಕೊಡೋರು ಯಾರೂ ಗತಿಯಿಲ್ಲ ಈ ಮನೇಲಿ’ ಅಂತಾ ಶುರುಮಾಡಿಕೊಂಡಿದ್ದ ನಮ್ಮಜ್ಜಿಗೆ ಮುಖ ತೊಳೆಯಲು ಬಿಸಿನೀರು ಕಾಯಿಸಿಕೊಟ್ಟು, ಜೊತೆಗೆ ಕೋಡೊಲೆಯಲ್ಲಿ ಕಾಫಿಯನ್ನೂ ಕದರಿದ್ದಳು.. ನಾನು ಕಾಫಿ ಕುಡಿಯುವಷ್ಟರಲ್ಲಿ ಅವ್ವ ಮತ್ತು ಅಣ್ಣ ಕೈತೋಟದೊಳಗೆ ಮಾತು ಮುಗಿಸಿ ಮನೆ ಜಗುಲಿ ಹತ್ತಿದ್ದರು. ಅಮ್ಮ ಕೇಳಿದಳು, ‘ಹಂಗಾದ್ರೆ ‘ಹೂವಿ’ಗೆ ಹೇಳೋಣ್ವಾ?’. ‘ಥೂ ಹೂವಿ ಬೇಡ, ಸುಮ್ನೆ ಡೌಲು... ನಾಗೇಶನ ಮನೆ ಅಮ್ಮನಿಗೆ ಹೇಳಿದ್ರೆ ಅವ್ರೇ ಬಂದು ಮಾಡಿಕೊಟ್ಟು ಹೋಗ್ತಾರೆ!’ ‘ನಾಗೇಶಣ್ಣನ ಮನೆ ಅಮ್ಮ ಬೆಂಗಳೂರಿಗೆ ಹೋಗಿದೆಯಂತಲ್ಲ, ಬರೋದು ಇನ್ನು ಮುಂದಿನ ತಿಂಗಳೇ ಅಂತಿದ್ದರಪ್ಪ...’ ಅವ್ವ ‘ಹಂಗಾರೆ ಏನ್ ಮಾಡೋದು ಆ ಹೂವಿಗೇ ಹೇಳಿ ಕಳ್ಸು, ಬಂದು ಮಾಡಿಕೊಡು ಅಂತಾ!’ ನಾನು ಸುಮ್ಮನಿರಲಾರದೇ ಕೇಳಿಯೇ ಬಿಟ್ಟೆ ‘ಏನು ಹೂವಿ ಬಂದು ಕೋಳಿ ಸಾರು ಮಾಡ್ಕೊಟ್ಟು ಹೋಗ್ತಾಳಾ?’ ನನ್ನ ಮಾತು ಕೇಳಿ ನನ್ನವ್ವನಿಗೆ ಸಿಟ್ಟು ಬ್ರಹ್ಮರಂಧ್ರಕ್ಕೇರಿತು...

"ಹಾಕೋ ಅವನ ಬಾಯಿ ಮೇಲೆ ಎರಡು, ಎಂತಾ ಅನಿಷ್ಟಾನ ಮನೆಯೊಳಗೆ ಮಾತಾಡ್ತಾನೇ!"

ನನ್ನಣ್ಣ ನನ್ನ ಬಾಯಿಯ ಮೇಲೆ ಹಾಗೇ ಪೆಟ್ಟು ಹಾಕಿದವನಂತೆ ಮಾಡಿ ಹೊರಕ್ಕೆಳೆದೊಯ್ದ..

"ಎಲ್ಲಿ ಕೇಳ್ಕೊಂಡ್ಯೋ ಅದ್ರ ಬಗ್ಗೆ?"

ನಾನು ಕೇಳಿದೆ, 'ಯಾವುದರ ಬಗ್ಗೆ?"

"ಅದೇ ಕೋಳಿ ಕೋಡೋದರ ಬಗ್ಗೆ!" ನಾವಿನ್ನೂ ಮನೆಯ ಜಗುಲಿಯ ಸೂರಿನಡಿಯಲ್ಲೇ ಇದ್ದೆವು! ಅಣ್ಣ ‘ಕೋಳಿ’ ಅಂದಿದ್ದ! ಆದರೆ ಅವನ ಮೇಲೆ ದೂರು ಯಾರಿಗೆ ಹೇಳುವುದು?

"ಅದೇ ನೀನು–ಅವ್ವ ಗೆಣಸಿನ ಮಡಿ ಹತ್ರ ಮಾತಾಡ್ತಾ ಇದ್ದ್ರಲ್ಲ"

"ಕಳ್ಳಾ, ಕತ್ತಲಲ್ಲಿ ಬಂದು ಜಾಸೂಸಿ ಮಾಡ್ತೀಯಾ?" ಎಂದವನೇ ತಮಾಶೆಯಿಂದ ನನ್ನ ಬುಡಕ್ಕೆರಡು ಬಿಟ್ಟು "ಅವ್ವನ ಮುಂದೆ ‘ಕೋಳಿ’ ಅಂತೆಲ್ಲ ಮಾತನಾಡಬೇಡ ಮತ್ತೆ!’ ಅಂತಾ ಎಚ್ಚರಿಸಿದ.

"ಮತ್ತೆ ಕೋಳಿ ಸಾರು ಯಾರು ಮಾಡೋದು?" ನಾನು ಕೇಳಿದೆ.

"ದ್ಯೆಯ್ಯದಮಕ್ಕಿ ಹೂವಿ" ಅವನು ಉತ್ತರಿಸಿದ...

"ಮತ್ತೆ ನಾವೆಲ್ಲ ತಿನ್ನಬೇಕಾ?" ನನ್ನ ಪ್ರಶ್ನೆಗೆ ಅವನು ನಕ್ಕ, ಕಿರುಗಣ್ಣಿನಲ್ಲಿ ನೋಡಿ "ಯಾಕೇ? ಕೊಟ್ರೆ ತಿಂತೀಯಾ?" ಅಂತಾ ಕೇಳಿದ.

"ಥೂ! ಇಲ್ಲಪ್ಪ! ನೀನು?"

"ನಾನು..." ಅಂದವನೇ ತಡೆದು, "ಬಾಯಿಲ್ಲಿ, ಕಿವೀಲಿ ಹೇಳ್ತೀನಿ..." ಆಂತ ನನ್ನ ಕಿವಿಯ ಸುತ್ತ ತನ್ನ ಕೈಗಳ ಗೂಡು ಮಾಡಿ ಬುಸ್ಸನೆ "ತಿಂತೀನಿ" ಅಂತಾ ಉಸುರಿದ. ನಾನು ಇನ್ನೂ ಜೋರಾಗಿ "ಥೂ... ಥೂ ಥೂ" ಅಂದೆ...

ಅಷ್ಟರಲ್ಲಿ ಅವ್ವ ಕರೆದುದರಿಂದ ನಾವಿಬ್ಬರೂ ಮನೆಯೊಳಹೊಕ್ಕೆವು, ಗುರುವಾರದ ಕೋಳಿಬಲಿಯ ವಿಷಯವಾಗಿ ನನ್ನಲ್ಲಿದ್ದ ಪ್ರಶ್ನೆಗಳು ಹಾಗೇ ಉಳಿದುಹೋದವು...

ನಮ್ಮನೆಯಿಂದ ಯಾವುದೇ ದೇವಸ್ಥಾನಕ್ಕೆ ಪೂಜೆಗೆ ಹೋದರೂ (ದೇವಸ್ಥಾನದಲ್ಲಿ ಪೂಜಾರಿ ಇಲ್ಲದಿದ್ದರೆ) ನಮ್ಮಣ್ಣನೇ ಪೂಜಾರಿ. ಇನ್ನು ಮಾರಿಕಟ್ಟೆ ಅನ್ನೋದು 'ಯೆಲ್ಲಪ್ಪ ಶೆಟ್ಟರ' ಹಳೇ ಕಾಫಿ ತೋಟದ ಒಳಗಿದ್ದ ಒಂದು ಸಣ್ಣ ಗುಡಿ. ಹಾಗಾಗಿ ಗುರುವಾರದ 'ಕೋಳಿಬಲಿ'ಗೆ ಅಣ್ಣನೇ ಪೂಜಾರಿ ಅಂತಾ ತೀರ್ಮಾನವಾಗಿತ್ತು. ಬುಧವಾರ ಬೆಳಿಗ್ಗೆ ಬೇಗ ಎದ್ದ ನಮ್ಮಮ್ಮ 'ಸಣ್ಣಯ್ಯಣ್ಣ'ರ ಮನೆಯ ಕೊಟ್ಟಿಗೆಯಿಂದ ನನ್ನ ಕೈಲಿ ಕರುವಿನ ಸಗಣಿ ತರಿಸಿ, ಕಪ್ಪು ಸಾಲದೆಂದು ಅದಕ್ಕೆ ಮನೆಯ ರೇಡಿಯೋದ ಹಳೆಯ ಸೆಲ್ಲುಗಳನ್ನು ಚಚ್ಚಿ, ಒಳಗಿದ್ದ ಇಂಗಾಲದ ಮಸಿಯನ್ನು ಬೆರೆಸಿ ಮನೆಯನ್ನೆಲ್ಲ ಸಾರಿಸಿದಳು, ಮತ್ತು ಕಾಫಿ ತೋಟದ ದಿನದ ಕೆಲಸಕ್ಕೆ ಹೋಗುವ ಮುನ್ನ ಒಂದು ಬಟ್ಟಲಲ್ಲಿ ಅರ್ಧ ಕಪ್ಪು ಅಕ್ಕಿಯನ್ನು ನೆನೆ ಹಾಕಿ ಹೋದಳು.

ಅವತ್ತೆಲ್ಲ ನನಗೆ ಸ್ಕೂಲಿನಲ್ಲಿ ಕೂರಲು ಮನಸ್ಸೇ ಬರಲಿಲ್ಲ, ಯಾವಾಗ ಗುರುವಾರ ಬೆಳಿಗ್ಗೆ ಬರುತ್ತೋ, ಯಾವಾಗ ಕೋಳಿ ಬಲಿ ನೋಡ್ತೀನೋ ಅನ್ನೋ ಕಾತರ. ಅವತ್ತು ಸಂಜೆ ಸ್ಕೂಲು ಮುಗಿಸಿ ಮನೆಗೆ ಬಂದಾಗ ತಡೆಯಲಾಗದೇ ಪಕ್ಕದ ಮನೆ 'ಹಾಫೀಸ್'ರವರ ಮಗ ನನ್ನ ಕ್ಲಾಸ್-ಮೇಟ್ 'ಫೈರೋಜ್'ನಿಗೆ 'ಕೋಳಿ ಬಲಿಯ ವಿಷಯ ಹೇಳೇ ಬಿಟ್ಟೆ. ಅವನು 'ಅಮ್ಮೀ' ಅಂತಾ ಮನೆಯೊಳಕ್ಕೆ ಓಡಿ ಹೋಗಿ ತನ್ನಮ್ಮನನ್ನು ಕರೆತಂದ. ಅವರಮ್ಮ ತೆಳ್ಳಗಿನ ಬೆಳ್ಳಗಿನ 'ನಾಸೀರಮ್ಮ'(ನಾನು ಕರೆಯುತಿದ್ದುದು) ಬಂದವರೆ ಜೋರಾಗಿ ಕಿರುಚಾಡುತ್ತಿದ್ದ ಅವನನ್ನು ಬೈದು ಸುಮ್ಮನಿರಿಸಿ ನನ್ನನ್ನು ಕೇಳಿದರು, 'ಏನೋ ಮಾರಿಕಟ್ಟೆಗೆ ಕೋಳಿಬಲಿ ಕೊಡ್ತೀರಾ?'. ನಾನು 'ಹೂಂ' ಅಂದೆ. ಲಿಂಗಾಯಿತರ ಮನೆಯವರು 'ಕೋಳಿಬಲಿ' ಕೊಡುತ್ತಿರುವ ವಿಷಯ ಕೇಳಿ ಫೈರೋಜ್-ನ ಅಮ್ಮ ಅಷ್ಟೇನೂ ಅಚ್ಚರಿಗೊಳಗಾದವರಂತೆ ಕಾಣಲಿಲ್ಲ. ಈಗಲೂ ನೆನಪಿರುವಂತೆ, ತಮ್ಮ ಸಣ್ಣ ಮೂಗಿನ ಮೂಗುತಿಯ ಕಲ್ಲು ಫಳಕ್ಕೆನ್ನುವಂತೆ ತುಂಟತನದಲ್ಲಿ ಮೂಗು ಮುರಿದು ಕೇಳಿದರು,

"ಹಂಗಾದ್ರೆ ನೀನೂ ತಿಂತೀಯಾ?"

ನಾನು ಕೆಂಪಗಾಗಿ 'ಇಲ್ಲ' ಅಂತಾ ತಲೆಯಾಡಿಸಿದೆ...

"ಕೋಳಿ ಬಲಿ ಕೊಡ್ತಾ ಇರೋದು ಯಾಕೆ?" ನನ್ನನ್ನು ಕೇಳಿದರು.

"ಅದೇ ಹೋದ ತಿಂಗಳು ಅಮ್ಮ-ಅವ್ವ-ಅಜ್ಜಿಗೆಲ್ಲ ಜ್ವರ ಬಂದಿತ್ತಲ್ಲ, ಅದಕ್ಕೆ!"

"ಹೌದಾ? ಯಾವತ್ತು?"

"ನಾಳೇನೇ!"

"ಸಾರು ಮಾಡಿದ್ರೆ ನಮ್ಗೂ ಸ್ವಲ್ಪ ಕೊಡೋಕೆ ಹೇಳೋ, ಲಿಂಗಾಯಿತರ ಮನೆ ಕೋಳಿ ಸಾರು ಹೆಂಗಿರುತ್ತೆ ಅಂತಾ ನಾವೂ ನೋಡೋಣ!"

ಸಂಜೆ ಆರುಗಂಟೆಗೆಲ್ಲ ಕೆಲಸದಿಂದ ಬಂದ ಅಮ್ಮ ಬೆಳಿಗ್ಗೆ ನೆನೆಸಿಟ್ಟಿದ್ದ ಅಕ್ಕಿಯನ್ನು ತೆಳ್ಳಗೆ ರುಬ್ಬಿ, ಇನ್ನಷ್ಟು ನೀರು ಮಾಡಿಕೊಂಡು, ಹೆಬ್ಬೆರಳಗಲದ ಬಿಳಿ ಬಟ್ಟೆ ನೆನೆಸಿ, ಬೆರಳಿನ ಸುರಳಿಯಲ್ಲಿ ಹಿಡಿದು, ಬೆಳಿಗ್ಗೆ ಸಾರಿಸಿ ಒಣಗಿದ್ದ ಮನೆಯ ಕೋಣೆಗಳ ಅಂಚಿಗೆಲ್ಲ ರಂಗೋಲಿ ಹಾಕಿದಳು; ಒಳೆಯ ಮೇಲಕ್ಕೆ ವಿಶೇಷವಾದ ರಂಗೋಲಿ. ಅಷ್ಟರಲ್ಲಿ ನಮ್ಮವ್ವ, ತೋಟದಿಂದ ತಂದಿದ್ದ ಹಲಸಿನ ಬಡುಕನ್ನು ಕತ್ತರಿಸಿ ಹೆಚ್ಚಿ ಸಾರಿಗೆ ಅಣಿಮಾಡಿದಳು, ನಾನು ಬೈಸಿಕೊಳ್ಳುವ ಭಯದಿಂದಲೇ ಒಲೆ ಮುಂದೆ ಕುಳಿತಿದ್ದ ಅವ್ವನ ಮುಂದೆ ನಿಂತು ಉಸುರಿದೆ,

"ಅವ್ವ, ಸಾರು ಮಾಡಿದ್ರೆ 'ನಾಸೀರಮ್ಮ'ನಿಗೂ ಕೊಡಬೇಕಂತೆ"

"ಎಂತಾ ಸಾರೋ? ಹಲ್ಸಿನ್-ಬಡುಕಿಂದಾ?"

"ಅಲ್ಲ... ನಾಳೆ ಮಾಡೋದು!" ನನಗೆ ಅಚ್ಚರಿಯಾಗುವಂತೆ ಅವ್ವ ನಕ್ಕಳು, ನಾನು 'ಕೋಳಿ'ಯೆಂಬ ಪದ ಉಪಯೋಗಿಸದೇ ಇದ್ದದ್ದು ಒಳ್ಳೆಯದಾಯಿತು ಅಂದುಕೊಂಡೆ.

ಅವಳು ಸುಮ್ಮನೆ "ನೋಡೇ ಸುಂದ್ರಾ, ನಿನ್ಮಗ ಊರಿಗೆಲ್ಲ ಹೇಳ್ಕಂಡ್ ಬಂದವನೆ!" ಅಂದಳು.

ಗುರುವಾರ ತೋಟದ ಕೆಲಸಕ್ಕೆ ಬಿಡುವು;ಅವತ್ತು ನಮ್ಮೂರಿನ ಸಂತೆ ಬೇರೆ. ಬೆಳಗ್ಗೆ ಸೂರ್ಯ ಮೂಡುವ ಮೊದಲೇ ಎದ್ದು ನೀರೊಲೆಗೆ ಉರಿಹಾಕಿ, ನಮ್ಮನೆಯವರೆಲ್ಲ ಸ್ನಾನ ಮುಗಿಸುವ ಹೊತ್ತಿಗೆ ನಮ್ಮಣ್ಣ ಬಿಳೀ ಪಂಚೆಯುಟ್ಟು ಅವರ ಮನೆಯಿಂದ 'ಹಾಲು ತುಪ್ಪ' ರೆಡಿ ಮಾಡಿಕೊಂಡು ಬಂದ. ಎಂಟುಗಂಟೆಗೆಲ್ಲ ನಾನು, ನಮ್ಮಣ್ಣ, ನಮ್ಮಮ್ಮ, ನಮ್ಮವ್ವ ನಾಲ್ವರೂ ಎರಡು ಫರ್ಲಾಂಗು ದೂರವಿದ್ದ 'ಮಾರಿಕಟ್ಟೆ' ತೋಟಕ್ಕೆ ಬರಿಗಾಲಲ್ಲಿ ನಡೆದೆವು. ಮಾರಿಕಟ್ಟೆ ತೋಟದ ಬೇಲಿ ದಾಟಿ ಒಳಗಿನ ಅರ್ಧ ಕಿಲೋಮೀಟರಿನ ದಾರಿ ಸವೆಸುವ ಹೊತ್ತಿಗೆ ನಮ್ಮ ಹಿಂದೆ ಇಪ್ಪತ್-ಇಪ್ಪತ್ತೈದು ಅಡಿ ದೂರದಲ್ಲಿ ಕಾಫಿ ಗಿಡಗಳ ಒತ್ತಿಗೆ ದೈಯ್ಯದಮಕ್ಕಿಯ ಹೂವಿ ಬರುತ್ತಿರುವುದು ಕಾಣಿಸಿತು. ಹಳೆಯ ಸೀರೆ, ಬಾಯಿ ತುಂಬಾ ಎಲಡಿಕೆ, ಸೊಂಟದಲ್ಲಿ ಎಲಡಿಕೆ ಚೀಲ ಜೊತೆಗೆ ಕೈಯಲ್ಲಿ ಹಳೆಯ ಕೊಳಕಾದ ಬ್ಯಾಗು, ಅದನ್ನು ಗಮನಿಸಿ ನನಗೆ ಮುಂದಿನದನ್ನು ನೆನೆದು ರೋಮಾಂಚನವಾಯಿತು...

ಕಾಫಿ ತೋಟದೊಳಗೆ ಅರ್ಧ ಕಿಲೋಮೀಟರ್ ಟ್ರಾಕ್ಟರ್ ದಾರಿಯಲ್ಲಿ ನಡೆದು, ತಗ್ಗು-ದಿಣ್ಣೆ ಹತ್ತಿಳಿದು, ಕೊನೆಗೊಂದು ತಗ್ಗಿನಲ್ಲಿ, ಬರೀ ಕಲ್ಲಿನ ಹೆಬ್ಬಂಡೆಯೇ ನೆಲವಾಗಿದ್ದ, ಕಾಫಿ ಗಿಡಗಳನ್ನು ನೆಡಲಾಗದ ಬಯಲಿನ ಮೂಲೆಯಲ್ಲಿ ನಮ್ಮಜ್ಜಿಗಿಂತ(ಅವ್ವ ಅಲ್ಲ) ಜಾಸ್ತಿನೇ ವಯಸ್ಸಾದ ಅರಳೀ ಮರ, ಮರದ ನೆರಳಿನಾಚೆಗೆ ಸೊಂಟದೆತ್ತರಕ್ಕೆ ಪಂಚಾಯತಿ ಕಟ್ಟೆಯಂತಹ ಅಗಲವಾದ ಕಲ್ಲು ಕಟ್ಟೆ, ಕಲ್ಲಿನ ಕಟ್ಟೆಯ ಪೂರ್ವದಿಕ್ಕಿಗೆ ಅವೇ ಒರಟೊರಟು ಕಲ್ಲು ಕಂಬಗಳಿಂದ ಮಾಡಿದ, ಚಾವಣಿಗೂ ಕಲ್ಲನ್ನೇ ಹಾಸಿದ ಒಂದು ಗಾಳೀ-ಮಂಟಪ, ಮಂಟಪದಲ್ಲಿ 'ಚಿಕ್ಕಮ್ಮ-ದೊಡ್ಡಮ್ಮರೊಂದಿಗೆ ಕುಳಿತಿರುವ ಮಾರಮ್ಮ'!

ಅಮ್ಮ ಸೊಂಟದಲ್ಲಿ ಇರುಕಿಕೊಂಡು ತಂದಿದ್ದ ಕೊಡದ ನೀರಿನಲ್ಲಿ ಸ್ವಲ್ಪ ಕಾಲು ತೊಳೆದುಕೊಂಡು ನಮ್ಮಣ್ಣ ಮೊದಲು ಕಲ್ಲು ಕಟ್ಟೆಯನ್ನೇರಿದ, ಅವನ ಹಿಂದೆ ಅವ್ವ, ಅಮ್ಮ ಮತ್ತು ನಾನು ಅವನು ನೆನೆಸಿದ್ದ ಬಂಡೆಯ ತೇವದ ಮೇಲೆ ನಮ್ಮ ಕಾಲುಗಳನ್ನೂ ತೇವ ಮಾಡಿಕೊಂಡು ಕಟ್ಟೆ ಹತ್ತಿದೆವು. ಅಮ್ಮ ಅಲ್ಲೇ ಬಿದ್ದಿದ್ದ ಪುರಲೆ ಕಡ್ಡಿಗಳನ್ನು ಒತ್ತು ಮಾಡಿಕೊಂಡು ಕಟ್ಟೆಯ ಮೇಲಿದ್ದ ತರಗೆಲೆಗಳನ್ನೆಲ್ಲ ಗುಡಿಸಿ ಕೆಳ ಹಾಕಿದಳು. ಅಣ್ಣ, ಕೊಡದ ನೀರು ಉಪಯೋಗಿಸಿ ಮಂಟಪದೊಳಗಿದ್ದ ಕರೀ ಕಲ್ಲುಮುಖದ ಮಾರಮ್ಮ, ಚಿಕ್ಕಮ್ಮ, ದೊಡ್ಡಮ್ಮಂದಿರನ್ನೆಲ್ಲ ತೊಳೆದ, ಜೊತೆಗೆ ಅವರ ಆಸು ಪಾಸಿಗಿದ್ದ ನೂರಾರು ಸಣ್ಣ ಸಣ್ಣ ಗುಂಡುಕಲ್ಲುಗಳಿಗೂ ನೀರು ಹಾಕಿ 'ಶುದ್ದಿ' ಮಾಡಿದ, ಪೂಜೆ ಶುರುವಾಯಿತು...

ಕುಂಕುಮ-ಅರಿಶಿನವನ್ನೆಲ್ಲ ಕಲ್ಲುಗಳಿಗೆ ಡಾಳಾಗಿ ಬಳಿದು, ವಿಭೂತಿಯ ಗೆರೆಗಳನ್ನೆಳೆದು, ನಮ್ಮನೆ ಹಿತ್ತಲಿನ ಹೂವುಗಳನ್ನೆಲ್ಲ ನೀರಿನಿಂದ ಮಾರಮ್ಮನ ಕುಟುಂಬದ ಮೈಗೆಲ್ಲ ಅಂಟಿಸಿ, ಮುಡಿಸಿ, ಊದುಬತ್ತಿ ಹಚ್ಚಿ.... ನಾನು ಇವುಗಳೆಲ್ಲದರೊಳಗೆ ಕಿರುಗಣ್ಣಿನಲ್ಲಿ 'ಹೂವಿ'ಯನ್ನೇ ಗಮನಿಸುತ್ತಿದ್ದೆ. 'ಹೂವಿ' ಇಲ್ಲಿ ಇಷ್ಟೊಂದು ಸಾಂಗವಾಗಿ ನೆರವೇರುತ್ತಿದ್ದ ಪೂಜಾವಿಧಿಗಳಿಗೂ ತನಗೂ ಏನೂ ಸಂಬಂಧವಿಲ್ಲದಂತೆ ಮಾರಿಕಟ್ಟೆಯ ಪರಿಧಿಗೂ ಬಾರದಂತೆ, ಅರಳೀಮರದ ನೆರಳಿನಲ್ಲಿ ಕುಕ್ಕರಗಾಲಿನಲ್ಲಿ ಕುಳಿತುಕೊಂಡಿದ್ದಳು, ಬಾಯಲ್ಲಿದ್ದಿದ್ದನ್ನು ಉಗಿದು, ಸೊಂಟದಿಂದ ಎಲಡಿಕೆ ಚೀಲ ತೆಗೆದು ಹೊಸದಾಗಿ ಎಲೆ-ಅಡಿಕೆ-ಸುಣ್ಣ-ಕಡ್ಡೀಪುಡಿ-ಕಾಚು-ಬಜೆಯ ಕವಳ ತಯಾರಿಸುತ್ತಿದ್ದಳು, ಅವಳ ಪಕ್ಕದಲ್ಲಿದ್ದ ಬಾಯಿಕಟ್ಟಿದ್ದ ಬ್ಯಾಗಿನೊಳಗೆ 'ಜೋಡಿ ಕೋಳಿ'ಗಳು ಮುಲುಗುಟ್ಟುತ್ತಿರುವುದು ಗೊತ್ತಾಗುತ್ತಿತ್ತು. ನಮ್ಮಣ್ಣ ಪೂಜೆ ಮುಗಿಸಿ, ಹಣ್ಣು ತುಪ್ಪ ನೈವೇದ್ಯ ಮಾಡಿ ಹೂವಿಯೆಡೆಗೆ ತಿರುಗಿ ನೋಡಿದ. ಅವಳು ಎದ್ದು, ತಯಾರಿಸಿದ್ದ ಎಲಡಿಕೆಯನ್ನು ದವಡೆಗೆ ಒತ್ತಿಸಿಕೊಂಡು, ಎಲಡಿಕೆ ಚೀಲವನ್ನು ವಾಪಸ್ಸು ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡು, ಬ್ಯಾಗಿನ ಬಾಯಿ ಬಿಡಿಸಿ, ಮೊದಲೊಂದು ಕೋಳಿ ತೆಗೆದು, ಸಣ್ಣ ಕುಡುಗೋಲಿನಿಂದ ಅದರ ಮ್ಯಾಣೆ ಹರಿದಳು, ಅದನ್ನು ಅಲ್ಲೇ ಬಿದ್ದು ಒದ್ದಾಡಲು ಬಿಟ್ಟು ಎರಡನೇ ಕೋಳಿಯನ್ನೂ ತೆಗೆದು ಅದಕ್ಕೂ ಸಮಾ ಗತಿ ಕಣಿಸಿದಳು... ಇದೆಲ್ಲ ಎಷ್ಟು ಬೇಗ ನಡೆದು ಹೋಯಿತೆಂದರೆ ನನಗೆ "ಸ್ವಲ್ಪ ತಡಿಯೇ 'ಹೂವಿ' ನಾನು ಸರೀ ನೋಡಲೇ ಇಲ್ಲ" ಅನ್ನೋ ಹಾಗಾಗಿತ್ತು. ನಮ್ಮಣ್ಣ ಸ್ವಲ್ಪ ಹೂವು-ತೀರ್ಥದ ನೀರು ತೆಗೆದುಕೊಂಡು ಕೋಳಿಗಳು ಬಿದ್ದು ಒದ್ದಾಡುತ್ತಿದ್ದ ದಿಕ್ಕಿಗೆ ಅಷ್ಟು ದೂರದಿಂದಲೇ ಪ್ರೋಕ್ಷಣೆ ಮಾಡಿ ಮಾರಮ್ಮನಿಗೆ ಕೋಳಿ ಬಲಿಯರ್ಪಿಸಿದ. ನಮ್ಮವ್ವ-ಅಮ್ಮ ಕೋಳಿ ಕೊಯ್ದಿದ್ದ ದಿಕ್ಕಿನೆಡೆಗೆ ನೋಡುತ್ತಲೂ ಇರಲಿಲ್ಲ... ಆಮೇಲೆ ಆದ ಮಂಗಳಾರತಿ ಮುಗಿಸಿಕೊಂಡು ನಾವೆಲ್ಲ ಸುಮ್ಮನೆ ಒಂದುಗಳಿಗೆ ಕುಳಿತಿದ್ದೆವು, ಅಷ್ಟರಲ್ಲಿ 'ಹೂವಿ' ಒದ್ದಾಟ ನಿಲ್ಲಿಸಿದ್ದ ಕೋಳಿಗಳನ್ನೂ, ಅವುಗಳ ತಲೆಗಳನ್ನು ಅದೇ ಬ್ಯಾಗಿನೊಳಕ್ಕೆ ತುಂಬಿಕೊಂಡಿದ್ದಳು ಪೂಜೆಯೆಲ್ಲ ಮುಗಿದು ನಾವೆಲ್ಲ ಮಾರಿಕಟ್ಟೆಯನ್ನಿಳಿದು, ಮುಂದೆ ಸಾಗಿದೆವು. ಸ್ವಲ್ಪ ದೂರ ಸಾಗಿ ನಿಂತ ನಮ್ಮವ್ವ ನನ್ನ ಕೈಗೆ ಹದಿನಾರು ರೂಪಾಯಿಗಳನ್ನೂ, ನೈವೇದ್ಯಕ್ಕೆ ಒಡೆದ ಒಂದು ಭಾಗ ತೆಂಗಿನ ಕಾಯನ್ನೂ ಕೊಟ್ಟು "ಅವಳಿಗೆ ಕೊಟ್ಟು, ವಾಪಸ್ಸು ಓಡಿ ಬಾ" ಎಂದಳು. ನಾವು ದಾರಿಯ ತಿರುವಿನಲ್ಲಿ ಮರೆಯಾಗುವುದನ್ನೇ ಕಾಯುತ್ತಾ ಇನ್ನೂ ಅರಳೀ ಮರದ ನೆರಳಿನಲ್ಲೇ ಹಾಯಾಗಿ ಎಲಡಿಕೆ ಜಗಿಯುತ್ತ ನಿಂತಿದ್ದ ಹೂವಿಯ ಹತ್ತಿರಕ್ಕೆ ಓಡಿ ಹೋಗಿ ಅವಳ ಚಾಚಿದ ಕೈಯೊಳಕ್ಕೆ ಐದು-ರುಪಾಯಿಯ ಒಂದು ನೋಟು, ಎರಡರ ಐದು, ಮತ್ತು

ಒಂದರ ಒಂದು ನೋಟುಗಳನ್ನು ತೆಂಗಿನ ಕಾಯಿಯೊಂದಿಗೆ ಕೊಟ್ಟು, ಏದುಸಿರು ಬಿಡುತ್ತಾ ವಾಪಸ್ಸು ಓಡಿ ಬಂದೆ. ಆ ತುರ್ತಿನಲ್ಲೂ 'ಹೂವಿ' ಹಿಡಿದಿದ್ದ ಬ್ಯಾಗು ಹೊಸ ರಕ್ತದ ಕಲೆ ಮಾಡಿಕೊಂಡಿದ್ದನ್ನು ಗಮನಿಸಿದೆ.

ಅಷ್ಟೇ! 'ಹೂವಿ' ಕೋಳಿ ಸಾರು ಮಾಡಿದ್ದು ನಿಜವಾದರೂ ಅವಳೇ ಮಾಡಿಕೊಂಡು ಅವಳ ಮನೆಮಂದಿಯೆಲ್ಲ ತಿಂದರು. ಅವಳು ಸಾಕಿದ್ದ ಅವಳ ಕೋಳಿಗಳನ್ನೇ ಕೊಯ್ದು ತಿನ್ನಲು ನಮ್ಮನೆಯ 'ಕೋಳಿಬಲಿ'ಯ ಕಾರಣ ಒದಗಿ ಕೋಳಿಯ ದುಡ್ಡೂ ಸಿಕ್ಕಿತ್ತು ಅವಳಿಗೆ! ನಾನು ಏನನ್ನೋ ಕೇಳಲು ಉತ್ಸುಕನಾಗಿರುವುದನ್ನು ಕಂಡು ತೋಟ ಬಿಟ್ಟು ರಸ್ತೆಗೆ ಬಂದಾದ ಮೇಲೆ ನಮ್ಮಣ್ಣ ಸ್ವಲ್ಪ ನಡಿಗೆ ನಿಧಾನ ಮಾಡಿದ, ಅಮ್ಮ ಅವ್ವ ಮುಂದೆ ನಡೆದರು. ನಾನು ನಾಲಿಗೆ ಕಚ್ಚಿಕೊಳ್ಳುತ್ತ ಬೇಸ್ತುಬಿದ್ದ ಕಿರುನಗುವಿನೊಂದಿಗೆ ಅಣ್ಣನನ್ನು ಕೇಳಿದೆ, "ಹಂಗಾದ್ರೆ ನಾವು ಯಾರೂ ಕೋಳಿ ಸಾರು ತಿನ್ನೋದಿಲ್ಲ?" ಅವನು ತನ್ನ ಯಾವಾಗಿನ ತಮಾಷೆಯೊಂದಿಗೆ ನನ್ನ ಬುಡಕ್ಕೆರಡು ಬಿಟ್ಟು "ಆಹಾ! ಕೋಳಿ ಸಾರು ತಿನ್ನೋಕೆ ಜೊಲ್ಲು-ಸುರುಸ್ಕೊಂಡು ಕಾಯ್ತಾ ಇದ್ದ ಅನ್ಸುತ್ತೆ. ನಡೀ ಅವ್ವನಿಗೆ ಹೇಳ್ತೀನಿ!" ನಾನು ನಗುತ್ತ ಮುಂದೋಡಿದೆ...

* * * *

ಇದೆಲ್ಲ ಆಗಿ ಹತ್ತಿರ-ಹತ್ತಿರ ಇಪ್ಪತ್ತೈದು ವರ್ಷಗಳೇ ಆಗಿವೆ. ಬಹಳ ಹಿಂದೆಯೇ ನಮ್ಮಜ್ಜಿ(ಅವ್ವ ಅಲ್ಲ) ಸತ್ತು, ನಾವೆಲ್ಲ ಮಲೆನಾಡಿನ ನಡುವಿನ ಆ ಹಳ್ಳಿ ಬಿಟ್ಟು, ಪಟ್ಟಣಕ್ಕೆ ಬಂದು ನೆಲೆಯಾದ ಮೇಲೆ ನಮ್ಮವ್ವ-ಅಮ್ಮನಿಗೆ 'ಜೋಡಿ ಕೋಳಿ' ಯ ಹರಕೆ ಮಾಡಿಕೊಳ್ಳಲು ಇಲ್ಲಿ 'ಸಾಲುಮರದಮ್ಮ' ಇದ್ದಾಳೆ. ಆದರೆ ಈ ಸಾಲು ಮರದಮ್ಮನಿಗೆ ಮಾರಿಕಟ್ಟೆಗೆ ಕೊಟ್ಟ ಹಾಗೆ ಕೋಳಿ ಬಲಿ ಕೊಟ್ಟರೆ ಸಾಲದು. ಕೊಯ್ದ ಕೋಳಿಯ ಪದಾರ್ಥ ಮಾಡಿ, ಅದನ್ನೂ ನೈವೇದ್ಯಕ್ಕಿಡಬೇಕು. ಹಾಗಾಗಿ ಸಾಲುಮರದಮ್ಮನ ಪೂಜೆಗೆ ಬರುವವರೆಲ್ಲ ಕೋಳಿ-ಕುರಿಗಳ ಜೊತೆಗೆ ಪಾತ್ರೆ-ಪಡಗಗಳೊಂದಿಗೆ ಕುಟುಂಬ ಸಮೇತವಾಗಿ ಬಂದು, ಸಾಲುಮರದಮ್ಮನ ಎದುರಿನ ವಿಶಾಲವಾದ ಬಯಲಿನಲ್ಲಿ ಒಲೆ-ಸ್ಟೋವು ಹಚ್ಚಿ ಅಡಿಗೆ ಮಾಡಿ, ನೈವೇದ್ಯ ಮಾಡಿ, ತಿಂದುಂಡು, ಒಂದು ಸಾಲು ಮರಗಳ ನೆರಳಿನಲ್ಲಿ ಜೊಂಪು ನಿದ್ದೆ ತೆಗೆದೂ ಹೋಗುತ್ತಾರೆ.

ಆದರೆ ಇದೆಲ್ಲ ನಮ್ಮ 'ಕೋಳಿ ಬಲಿ'ಗೆ ಅಡ್ಡಿ ಬಂದಿಲ್ಲ ಬಿಡಿ. ನಮ್ಮವ್ವನ ಸಣ್ಣ ಮಗ – ನನ್ನ ಸೋದರ ಮಾವ 'ಕ್ರಿಸ್ತೂವರ' ಹುಡುಗಿಯನ್ನು ಮದುವೆಯಾಗಿ ಇದೇ ಪಟ್ಟಣದಲ್ಲಿರುವುದರಿಂದ ನಾವು ಕೋಳಿ ಬಲಿಗೆ ಹೇಳಿದಾಗಲೆಲ್ಲ ಆಟೋದಲ್ಲಿ, ಹೆಂಡತಿ (ನಮ್ಮತ್ತೆ) ಮಕ್ಕಳೊಂದಿಗೆ, ಗ್ಯಾಸ್ ಸ್ಟೋವು, ಪಾತ್ರೆ ಪರಿಕರಗಳೊಂದಿಗೆ 'ಸಾಲುಮರದಮ್ಮ'ನ ಸನ್ನಿಧಿಗೆ ಬಂದಿಳಿಯುತ್ತಾನೆ. ಸೊಸೆ ತಾನಾಗಿ ಮಾತನಾಡಿಸಿದರೆ ಮಾತ್ರ ಮಾತನಾಡಿಸುವ ನಮ್ಮವ್ವನಿಗೆ ತನ್ನ ಮೊಮ್ಮಕ್ಕಳನ್ನು ಕಂಡರೆ ಭಾರೀ ಪ್ರೀತಿ. ಅವಕ್ಕೆಲ್ಲ ಲಿಂಗಧಾರಣೆ ಮಾಡಿಸುವಾ ಅಂತಾ ಯೋಚನೆಯಲ್ಲಿದ್ದಾಳೆ...

ನಮ್ಮ ಸಸ್ಯಾಹಾರಿ ಪೂಜೆಯೆಲ್ಲ ಮುಗಿದು ನಾವು ಹೊರಡುವ ಹೊತ್ತಿಗೆ ನಮ್ಮತ್ತೆ ಕೊಯ್ದ ಕೋಳಿಗಳ ಪಾಕಕ್ಕೆ ಅಲ್ಲೇ ನೆರಳಿನಲ್ಲಿ ಸಾಮಾನು ಅಣಿ ಮಾಡಿಕೊಳ್ಳುತ್ತಿರುತ್ತಾಳೆ. ಯಥಾ ಪ್ರಕಾರ ಒಂದು ತೆಂಗಿನ ಹೋಳು ಮತ್ತೀಗ ಜೋಡಿ ಕೋಳಿಗಳ ರೇಟು ನೂರಿಪ್ಪತ್ತು ರೂಪಾಯಿಯನ್ನು ನಾನು ಮಾವನಿಗೆ ಕೊಡಲು ಹೋಗುತ್ತೇನೆ, ನಮ್ಮಾವ "ಏನೋ, ಬೆಂಗಳೂರಿನಲ್ಲಿ ಮಾಂಸ ಮಡ್ಡಿಯೆಲ್ಲ ತಿಂತೀಯಂತೇ? ನೀನಿರು, ಊಟ ಮಾಡಿಕೊಂಡು ಹೋಗುವಿಯಂತೆ" ಅಂತಾ ಜೋರಾಗಿ ನಗುತ್ತಾನೆ. ಅತ್ತೆಯೂ ಕಳ್ಳಧ್ವನಿಯಲ್ಲಿ "ಇರೂ ಶಿವು" ಅನ್ನುತ್ತಾಳೆ. ನಾನು ಹುಳ್ಳಗೆ ನಕ್ಕು "ಅವ್ವ ಬೈಯುತ್ತೆ" ಅಂತೇಳಿ ವಾಪಸ್ಸು ಬಂದುಬಿಡುತ್ತೇನೆ!

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** shivuks@gmail.com